ಪರಿಕರಗಳ ಮೂಲಕ ನೀವು ಆ ನಿರ್ಣಯ ತೆಗೆದುಕೊಳ್ಳುವಂತೆ ಮಾಡಲಾಗಿದೆಯೇ? ಅಂತಹ ಪರಿಕರಗಳನ್ನು ಸಕಾಲಿಕ ಹಾಗೂ ಸಮರ್ಪಕವಾಗಿ ಪೂರೈಸುವಲ್ಲಿ ನಾವರಿಯದ ಆ 'ಬಿಗ್ ಬಾಸ್'ನ ಕೈವಾಡ ಇರಬಹುದೇ? ಹೀಗೇ – ನಾವು ಯಾವ ರೆಸ್ಟೋರೆಂಟಿನಲ್ಲಿ ತಿನ್ನಬೇಕು, ಯಾವ ಫೋನ್ ಬಳಸಬೇಕು ಇತ್ಯಾದಿಗಳನ್ನು ನಿಯಂತ್ರಿಸುವ ಸಂಗತಿ ಬದಿಗಿರಲಿ; ನಿಮ್ಮ ಸಂಗಾತಿಗೆ ಯಾವ ಬಣ್ಣದ ಒಳ ಉಡುಪು ಇಷ್ಟ ಎನ್ನುವುದನ್ನು ನಿಮಗಿಂತಲೂ ನಿಖರವಾಗಿ ಬಲ್ಲ ಆತ. ಹಾಗೂ ಅದನ್ನೇ ಕೊಳ್ಳುವಂತೆ ನಿಮ್ಮನ್ನು ಪುಸಲಾಯಿಸಬಲ್ಲ.

★★★

ವರ್ಷದ ಹಿಂದೆ, ಭಾರತದಲ್ಲಿ ಹೂಡಿಕೆ ಮಾಡಲು ಆಸಕ್ತಿ ಹೊಂದಿದ್ದ ಅಮೆರಿಕನ್ ಮೂಲದ ಆಸ್ಪತ್ರೆಗಳ ಸಮೂಹವೊಂದರ ಮುಖ್ಯಸ್ಥನೊಡನೆ ಮೀಟಿಂಗ್ ಒಂದರಲ್ಲಿ ಪಾಲ್ಗೊಳ್ಳುವ ಅವಕಾಶ ದೊರಕಿತ್ತು. ಬೆಂಗಳೂರಿನ ಉತ್ತರ ಭಾಗದಲ್ಲಿ ಆಸ್ಪತ್ರೆಗಾಗಿ ಜಾಗ ಹಾಗೂ ಕಟ್ಟಡ ಕಟ್ಟಿಸಿಕೊಡುವ ಡೆವಲಪರ್‌ನ ಪ್ರತಿನಿಧಿಯಾಗಿ ನಾನು ಅಲ್ಲಿದ್ದೆ. ಬೆಂಗಳೂರಿನಲ್ಲಿ ಆಸ್ಪತ್ರೆ ಆರಂಭಿಸುವ ಸಲುವಾಗಿ ಆ ಕಂಪನಿ ಮಾಡಿಕೊಂಡ ಪೂರ್ವಾನ್ವೇಷಣೆ ಹಾಗೂ ಮುಂದಿನ ತಯಾರಿಗಳ ಬಗ್ಗೆ ಅಲ್ಲಿ ಚರ್ಚೆಯಾಯಿತು. ಯಾವುದೋ ವಿದೇಶೀ ಏಜೆನ್ಸಿಯ ಮುಖೇನ ಬೆಂಗಳೂರು ಉತ್ತರದಲ್ಲಿ ವಾಸಿಸುವ ಜನರ ಸರ್ವೇ ಮಾಡಲಾಗಿದೆ. ಅಲ್ಲಿರುವವರಿಗೆಲ್ಲ ಯಾವ್ಯಾವ ರೋಗವಿದೆ, ಮುಂದೆ ಯಾವ ರೋಗ ಬರುವ ಸಾಧ್ಯತೆಯಿದೆ ಇತ್ಯಾದಿ ಅಷ್ಟೇ ಅಲ್ಲ, ಜನರಿಗೆ ಯಾವ ರೋಗದ ಬಗ್ಗೆ ಹೆಚ್ಚಿನ ಭಯವಿದೆ ಎಂಬ ಡಾಟಾ ಕೂಡಾ ಸಂಗ್ರಹಿಸಲಾಗಿತ್ತು. ಜೊತೆಗೆ, ಸುತ್ತಮುತ್ತ ಈಗಾಗಲೇ ಇರುವ ದವಾಖಾನೆಗಳು ಹಾಗೂ ಅಲ್ಲಿ ಉಪಲಭ್ಯವಿರುವ ಸೌಲಭ್ಯಗಳ ಸಮೀಕ್ಷೆಯೂ ಆಗಿತ್ತು. ಇವೆಲ್ಲವುಗಳ ಅಧ್ಯಯನದ ಅನಂತರ, ತಾವು ಹೂಡಿಕೆ ಮಾಡುತ್ತಿರುವ ಆಸ್ಪತ್ರೆಯನ್ನು ಕ್ಯಾನ್ಸರ್ ಸ್ಪೆಷಾಲಿಟಿ ಹಾಸ್ಪಿಟಲ್ ಆಗಿಸುವ ನಿರ್ಧಾರ ಮಾಡಿತು ಆ ಸಂಸ್ಥೆ. ಮಾತಿನ ನಡುವೆ, ಆ ಆಸ್ಪತ್ರೆಗಳ ಸಮೂಹದ ಮುಖ್ಯಸ್ಥ – 'ಮುಂದಿನ ಇಪ್ಪತ್ತು ವರ್ಷಗಳಲ್ಲಿ ಬೆಂಗಳೂರಿನಲ್ಲಿ ಕ್ಯಾನ್ಸರ್‌ಪೀಡಿತರಾಗಿ ಸಾಯುವ ರೋಗಿಗಳು ಅತೀ ಹೆಚ್ಚಿರುತ್ತಾರೆ ಎಂಬುದನ್ನು ಜನರು ನಂಬುವಂತೆ ಮಾಡುವುದು ಮುಖ್ಯ. ಅದೇನೂ ಕಷ್ಟವಲ್ಲ' ಎನ್ನುವ ಮಾತು ಹೇಳಿದ! ಹಾಗಾದರೆ, ನಮಗೆ ಯಾವ ರೋಗ ಬರಬೇಕು ಎಂಬುದನ್ನೂ ಬೇರೆ ಯಾರೋ ನಿರ್ಧರಿಸುತ್ತಾರೆ ಎಂದಾಯಿತಲ್ಲವೇ?

ಅದರರ್ಥ, ನಮ್ಮ ಭವಿಷ್ಯದ ರೋಗ ನಿರ್ಧರಿಸುವ ಹಕ್ಕು ಯಾವುದೋ ದೊಡ್ಡ ಆಸ್ಪತ್ರೆಯ ಮಾಲೀಕನದು ಅಂತಲ್ಲ. ಅದು ಏಕವ್ಯಕ್ತಿ ಯಾ ಸಂಸ್ಥೆಯ ನಿರ್ಣಯವೂ ಅಲ್ಲ. ಹಾಗೆ ನೋಡಿದರೆ, ನಾವು ಉಜ್ಜುವ ಟೂತ್‌ಪೇಸ್ಟು, ಸೇವಿಸುವ ಎಸಿ ಗಾಳಿ, ತಿನ್ನುವ ಆಹಾರದಲ್ಲಿ ಬಳಸಿದ ಪದಾರ್ಥ, ತುಟಿ ಒಡಕಿಗೆ ಹಚ್ಚುವ ಬಾಮ್... ಹೀಗೇ ಹಲವಾರು ವಸ್ತುಗಳಿಗೂ ಆ ವಸ್ತುಗಳನ್ನು ಉತ್ಪಾದಿಸುವ ಸಂಸ್ಥೆಗಳಿಗೂ ಇಂತಹ ನಿರ್ಧಾರದಲ್ಲಿ ಪಾಲಿದೆ. ಹಾಗಾದರೆ, ಅವರೆಲ್ಲ ಒಟ್ಟಿಗೇ ಕೂತು ಏನಾಗಬೇಕೆಂದು ತೀರ್ಮಾನ ತೆಗೆದುಕೊಳ್ಳುತ್ತಾರೆಯೇ? ಅದು ಕಾರ್ಯತಃ ಸಾಧ್ಯವೆನಿಸುವುದಿಲ್ಲ. ಅಂತಾದರೆ, ಯಾರು ಇದನ್ನೆಲ್ಲ ನಿರ್ಧರಿಸುವುದು? ಗೊಂಬೆಗಳನ್ನಾಡಿಸುವ ದಾರದ ಕೈ ಇರುವುದಾದರೂ ಎಲ್ಲಿ? ಈ ಮೊದಲು ಹೇಳಿದ ಎಲ್ಲಾ ವಸ್ತು, ವ್ಯಕ್ತಿಗಳಲ್ಲಿ ಪ್ರವಹಿಸುತ್ತಿರುವ ಅಂತಃವಾಂಛೆಯೊಂದು ತಣ್ಣನೆ ಹರಿದು ಬಂದು ಒಂದೆಡೆ ಸೇರಿ ಬೃಹದ್ ಶಕ್ತಿಯೊಂದು ಸೃಷ್ಟಿಯಾಗಿರಬಹುದೇ? ಅದಲ್ಲದೇ ದೇಶದ ಶತ ಕೋಟಿ ಜನರ ಯಾವುದೋ ಅಂಶ ಅಣುಅಣುವಾಗಿ ಸ್ರವಿಸುತ್ತ ಅದರ ಜೊತೆಗೂಡಿರಬಹುದೇ? ಅದು ನಿಜವೆಂದಾದರೆ, ಆ ಶಕ್ತಿಯ ಸೃಷ್ಟಿಯಲ್ಲಿ ಹೆಚ್ಚಿನ ಪಾಲುದಾರಿಕೆ ಯಾರದು? ಉತ್ತರಿಸುವುದು ಕಷ್ಟ. ದಿಟವೇನೆಂದರೆ, ಆ ಶಕ್ತಿಗೆ ನಿಖರ ಹೆಸರೆಂಬುದಿಲ್ಲ. ಲಿಂಗವಂತೂ ಮೊದಲೇ ಇಲ್ಲ. ಅದೊಂದು 'ಮಾಫಿಯಾ', 'ಲಾಬಿ'